ನೋಡುವ ದೃಷ್ಟಿಯೂ ಬದಲಾಗುತ್ತಿತ್ತೇನೋ. ಅವನ ಕೆಲಸಕ್ಕೆ ಇವಳ ಕುಮ್ಮಕ್ಕು ಇತ್ತು ಎಂದು ಅರ್ಥೈಸಿಕೊಂಡರೆ ಆಶ್ಚರ್ಯವೇನಿರಲಿಲ್ಲ. ತಾನು ಸಿಡಿದು ಬಿದ್ದಿದ್ದು ಸರಿ. ಅವನು ಆತ್ಮಹತ್ಯೆಗೆ ಕೈ ಹಾಕಿದ್ದು... ಕೈ ಹಾಕಿದ್ದು... ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಚಂಪನಿಗೆ ಅಸಾಧ್ಯವಾಗಿತ್ತು.

★★★

ಸುಭದ್ರಮ್ಮನಿಗೆ ಇಬ್ಬರು ಮಕ್ಕಳು. ದೊಡ್ಡವನು ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಓದುತ್ತಿರುವ ಮಹೇಶ. ಡಿಗ್ರಿ ಮುಗಿಸಿಕೊಂಡಿರುವ ಮಗಳು ಮಾಲಿನಿಗೆ ಮದುವೆ ನಿಶ್ಚಯವಾಗಿದೆ. ಸುಭದ್ರಮ್ಮನಂತಾ ಮಾತಾಳಿ ಹೆಂಗಸಿಗೆ ಚಂಪಾ ಸಿಕ್ಕಿದ್ದು ಬಾಯಿಚಪಲ ತೀರಿಸಿಕೊಳ್ಳಲು ಒಳ್ಳೇ ಜೋಡಿ ಸಿಕ್ಕಿದ ಹಾಗಾಗಿತ್ತು. ಕೆಲಸದ ಹೊರೆಯೂ ಅರ್ಧಕ್ಕರ್ಧ ಕಮ್ಮಿಯಾಗಿತ್ತು. ಚಂಪಾ ಕೂಡಾ ಹಂಗಿಲ್ಲದ ಹೊಸ ವಾತಾವರಣದಲ್ಲಿ ಚಿಗಿತುಕೊಂಡಳು. ಸುಭದ್ರಮ್ಮ ಯಾವುದಕ್ಕೂ ಕೈ ಚೊಟ್ಟ ಮಾಡುತ್ತಿರಲಿಲ್ಲ. ಈ ಮನೆಗೆ ಬರುವಾಗ ದೋಟಿಗಳದಂತಿದ್ದ ಚಂಪಾ ತಿಂಗಳೆರಡು ಕಳೆಯುವುದರಲ್ಲಿ ಬುರುಡುಬುರುಡಾಗಿ ಮೈ ತುಂಬಿಕೊಂಡಳು. ಮುಖದಲ್ಲಿ ಕಳೆ ಬಂತು. ತೌರುಮನೆಯಲ್ಲಿ ಇದರ ಎರಡರಷ್ಟು ಬಿಗೀ ಕೆಲಸ ಮಾಡುತ್ತಿದ್ದವಳಿಗೆ ಈ ಮನೆಯ ಕೆಲಸ ಹೆಚ್ಚೆಚ್ಚು ಅನಿಸುತ್ತಿರಲಿಲ್ಲ. ತಿಂಗಳಲ್ಲಿ ಮೂರು ದಿನ ಕಡ್ಡಾಯ ರಜೆ. ಈ ವಿಷಯದಲ್ಲಿ ಸುಭದ್ರಮ್ಮನಿಗೆ ಚೂರು ಅಸಮಾಧಾನ.

"ಹಬ್ಬ ಹುಣ್ಣಿಮೆ ಅಂತ ಕೆಲಸ ಜಾಸ್ತಿ ಇದ್ದಾಗ್ಲೇ ಕೈ ಕೊಟ್ಟುಬಿಡ್ತಿ. ಬೆನ್ನುಕೋಲು ಮುರಿದು ಹೋಗುತ್ತೆ ನಂಗೆ..." ಎನ್ನುತ್ತಲೇ ಅಷ್ಟೆತ್ತರದಿಂದ ಅನ್ನ ಬಡಿಸುತ್ತಿದ್ದರು. ಗಂಟಲಲ್ಲಿ ಅನ್ನ ಇಳಿಯುತ್ತಿರಲಿಲ್ಲ ಚಂಪನಿಗೆ. ಅವಳಾದರೂ ಏನು ಮಾಡಿಯಾಳು? ದೇಹ ಪ್ರಕೃತಿ. ಹೀಗೆ ಕೆಲಸದ ಹೊರೆ ಜಾಸ್ತಿಯಾದಾಗ ಕಿರಿಕಿರಿಯ ಮಾತಾಡುತ್ತಿದ್ದುದನ್ನು ಬಿಟ್ಟರೆ ಮಿಕ್ಕಂತೆ ಸುಭದ್ರಮ್ಮ ಒಳ್ಳೇ ಹೆಂಗಸೇ. ಅವರ ಬಗ್ಗೆ ಯಾವ ದೂರೂ ಇಲ್ಲ ಚಂಪನಿಗೆ.

★★★

ಮಾಲಿನಿಯ ಮದುವೆಯಾಗಿ ಅವಳು ಗಂಡನಮನೆಗೆ ಹೊರಟು ಹೋದಳು. 'ಬಿಕೋ...' ಅನ್ನತೊಡಗಿತು ದೊಡ್ಡ ಮನೆ. ಮಹೇಶ ಓದು ಮುಗಿದ ಮೇಲೆ ಅಲ್ಲೇ ಕೆಲಸ ಹುಡುಕಿಕೊಳ್ಳುತ್ತಾನೇ ವಿನಾ ಹಳ್ಳಿಮನೆಗೆ ಬಂದಿರುವುದು ಸುಳ್ಳು. "ಈ ಮನೇಲಿ ಕೊನೆಗೆ ಉಳಿಯೋದು ನಾವಿಬ್ರೇ ಗಂಡ, ಹೆಂಡತಿ. ಇಲ್ಲೇ ಇದ್ದಿದ್ದು ನಮಗೆ ಅಭ್ಯಾಸ ಆಗ್ಬಿಟ್ಟಿದೆ" ಎಂದು ಉರು ಹಾಕುವ ಸುಭದ್ರಮ್ಮ ಚಂಪನ ಎದೆಯಲ್ಲಿ ಆಸೆಯ ದೀಪವೊಂದನ್ನು ಹಚ್ಚಿಟ್ಟಿದ್ದಾರೆ. "ನೀನು ನಮ್ಜೊತೇನೇ ಕಾಯಂ ಆಗಿ ಇದ್ಬಿಡು ಮಾರಾಯ್ತೀ. ನಿಂಗೊಂದು ದಿಕ್ಕು, ನಮಗೊಂದು ಧೈರ್ಯ. ಹಾಸಿಗೆ ಹಿಡಿದು ನರಳತಿರೋ ಅತ್ತೆ ಹೀಗೇ ಇನ್ನು ಹತ್ವೊರ್ಷ ಬದುಕಿದ್ರೂ ಆಶ್ಚರ್ಯ ಇಲ್ಲ. ನೋಡ್ಕಳ್ಳೋಕೆ ಗಟ್ಟಿಯಾಗಿರೋರೊಬ್ರು ಬೇಕಲ್ಲ?" 'ಯಾಕಾಗಬಾರದು?' ಎಂದು ಚಂಪನಿಗೂ ಅನಿಸತೊಡಗಿದೆ. ಮೂರೋ, ಆರೋ ತಿಂಗಳಿಗೆ ಒಮ್ಮೆ ಮುಖ ತೋರಿಸುತ್ತಾನೆ ಅಣ್ಣ, ತಂಗಿಯ ದುಡಿಮೆಯ ದುಡ್ಡು ವಸೂಲು ಮಾಡಿಕೊಂಡು ಹೋಗಲು. ಹೀಗೆ ಬಂದಾಗ ಹೆಚ್ಚಿನ ಒಡನಾಟ, ಮಾತುಕತೆ, ಎಂತದಿಲ್ಲ. 'ಹೆಂಗಿದೀಯೇ?' ಲೋಕಾರೂಢಿಯ ಒಂದು ಪ್ರಶ್ನೆ. 'ಇದೀನಿ ಹಿಂಗೇ...' ಲೋಕಾರೂಢಿಯ ಉತ್ತರ.

★★★

ಮತ್ತೆರಡು ವರ್ಷ ಅನ್ನುವುದರಲ್ಲಿ ಮನೆಮಗಳು ಬಸುರಿ. ಬಾಣಂತನಕ್ಕೆ ಮನೆಗೆ ಬರುತ್ತಾಳೆ ಮಗಳು. ಖುಷಿಯ ಮಧ್ಯೆಯೂ ಸುಭದ್ರಮ್ಮನಿಗೆ ಆತಂಕ. "ಬಾಣಂತನ ಅಂದ್ರೆ ಸಸಾರಾನಾ? ಬಾಣಂತಿ ಬಚ್ಚಲು, ಮಗುವಿಗೆ ಎರೆತ, ಪಥ್ಯದ ಅಡುಗೆ, ಲೇಹ್ಯ, ಕಷಾಯ ಅಂತ ಗೊತ್ತಿರೋರೊಬ್ರು ಸಿಕ್ಕಿದ್ರೆ ಲಾಯ್ಕಿತ್ತು. ನಿಂಗ್ಯಾರಾದ್ರೂ ಗೊತ್ತನೇ?" ಎಂದು ಅವರು ನೇರವಾಗಿ ಕೇಳಿದಾಗ